

ಮೈಥಿಲಿ ನಗರದ ಮಹಾರಾಜ ಸುಶರ್ಮನಿಗೆ ನಾವಿಬ್ಬರೇ ಹೆಣ್ಣು ಮಕ್ಕಳು. ನಾನು ಮಧುರ...ನನ್ನ ತಂಗಿ ಮಾಧುರ್ಯ... ನನಗಿಂತ ಎರಡು ವರ್ಷ ಕಿರಿಯಳು.. ನನಗೀಗ ಇಪ್ಪತ್ತರ ಹರೆಯ. ಮಹಾರಾಜನಿಗೆ ನನ್ನ ಮೇಲೆ ಅತಿ ಪ್ರೀತಿ...ಅಮ್ಮನಿಗೆ ಮಾಧುರ್ಯ ಎಂದರೆ ಅತಿ ಅಕ್ಕರೆ...ಅಮ್ಮ ಮಾಧುರ್ಯಳನ್ನು ಅತಿ ಮುದ್ದು ಮಾಡುತ್ತಿದ್ದರೆ ನನಗೇಕೋ ಕೆಟ್ಟ ಕೋಪ.. ಸ್ನಾನಗೃಹಕ್ಕೆ ನುಗ್ಗಿ ಪರಿಚಾರಿಕೆಯರ ಕೈಯಲ್ಲಿ ಉಸಿರು ನಿಂತು ಬಿಡೋವಷ್ಟು ರಭಸದಲ್ಲಿ ತಣ್ಣೀರು ಹೊಯ್ಯಿಸಿಕೊಂಡು ಹೊರ ಬಂದಾಗ ನಾನು ಮತ್ತೆ ಮನುಷ್ಯಳಾಗ್ತೀನಿ. ಹಾಗೇಂತ ಮಾಧುರ್ಯ ಅಂದ್ರೆ ನನ್ನ ಜೀವದ ಜೀವ. ಅವಳಿಲ್ಲವಾದರೆ ನನ್ನ ಜೀವ ಕ್ಷಣ ಕಾಲವೂ ನಿಲ್ಲುವುದಿಲ್ಲ.

* * *

ನಾವಿಬ್ಬರೂ ಪಕ್ಕದ ಸಾರಂಗ ನಗರದ ಅಂಚಿನಲ್ಲಿರುವ ಮಹಾಕಾಳಿಯ ಗುಡಿಗೆ ಹೊರಟಿದ್ದೇವೆ. ಅಪ್ಪಯ್ಯ ನಮ್ಮ ರಕ್ಷಣೆಗಾಗಿ ಮೂವತ್ತು ಮಂದಿಯ ದಂಡನ್ನೇ ಕಳಿಸಿದ್ದಾನೆ. ನಮ್ಮ ಮೇನೆಯನ್ನು ಸರದಿಯಲ್ಲಿ ಹೊರಲು ಮತ್ತೆ ಎಂಟು ಮಂದಿ ಆಳುಗಳು ಇದ್ದಾರೆ. ಕಾಡು ಹಾದಿಯಲ್ಲಿ ಅಕಸ್ಮತ್ತಾಗಿ ಎದುರಾಗುವ ನವಿಲು ಜಿಂಕೆಗಳನ್ನು ನೋಡಲು ನಾವಿಬ್ಬರೂ ಮೇನೆಯ ಬಾಗಿಲು ತೆಗೆದಿದ್ದೇವೆ. ಕಾಡು ಮತ್ತಷ್ಟು ದಟ್ಟವಾಯಿತು. ದಂಡಿನ ಮುಖ್ಯಸ್ಥ ಬಗ್ಗಿ ಮೇನೆಯ ಬಾಗಿಲೆಳೆದುಕೊಳ್ಳುವಂತೆ ವಿನಂತಿಸಿದರು. ಸೇವಕಿ ಬಾಗಿಲೆಳೆದು ನಮಗೆ ಲಾವಂಚದ ಬೀಸಣಿಕೆಯಿಂದ ಗಾಳಿ ಬೀಸಲಾರಂಭಿಸಿದಳು. ನಾವಿಬ್ಬರೂ ಚದುರಂಗ ಆಡಲಾರಂಭಿಸಿದೆವು.

ಸ್ವಲ್ಪ ದೂರ ಹೋದಾಗ ಗದ್ದಲ ಕೇಳಿ ಬಂತು. ಆಳುಗಳು ಮೇನೆಯನ್ನಿಳಿಸಿದರು. ನಾನು ಪರದೆ ಸರಿಸಿ ನೋಡಿದೆ. ಎದೆ ಝಲ್ಲೆನಿಸಿತು. ಸುಮಾರು ಐವತ್ತಕ್ಕಿಂತಲೂ ಮಿಕ್ಕಿದ ಕಪ್ಪು ಮುಸುಕು ಧರಿಸಿದ್ದ ಚೋರ ಪಡೆ ನಮ್ಮ ಮೇಲೆ ಆಕ್ರಮಣ ನಡೆಸಿತ್ತು. ಸುಮಾರು ಹತ್ತು ಮಂದಿ ನಮ್ಮ ಸೈನಿಕರು ನಮ್ಮ ಮೇನೆಯನ್ನು ಸುತ್ತುವರಿದಿದ್ದು ನಮ್ಮನ್ನು ರಕ್ಷಿಸುತ್ತಿದ್ದರು. ಉಳಿದ ಮಂದಿ, ಚೋರರೊಡನೆ ಸೆಣಸಾಡುತ್ತಿದ್ದರು. ನಾವು ಸೋಲುವ ಲಕ್ಷಣ ದಟ್ಟವಾಗಿ ಕಾಣುತ್ತಿತ್ತು. ನಾನು ಮೇನೆಯಿಂದ ಹೊರಗೆ ಧುಮುಕಿದೆ. ನಮ್ಮ ಸೈನಿಕನ ಒರೆಯಿಂದ ಖಡ್ಗವನ್ನೆಳೆದು ಕಳ್ಳರ ಮೇಲೆ ನುಗ್ಗಿದೆ. ನಾನು ಬೀಸಿದ ಖಡ್ಗದೇಟು ಕಳ್ಳನ ಮುಖದ ಮೇಲೆ ಬಿದ್ದು ರಕ್ತ ಚಿಮ್ಮಿತು. ಕಳ್ಳ ಆಘಾತದಿಂದ ಗಾಯ ಸವರಲು ಮುಖದ ಮುಸುಕು ಸರಿದು ಹೋಯ್ತು. ಬೆಕ್ಕಿನ ಕಣ್ಣಿನ ವಿಲಕ್ಷಣ ಕಳ್ಳ ಓಡಿ ಹೋದ. ನಾನು ಇನ್ನೊಬ್ಬ ಕಳ್ಳನ ಮೇಲೆ ಆಕ್ರಮಣಕ್ಕೆ ಸಿದ್ಧಳಾದೆ. ನಾನು ಅವನ ಮೇಲೆ ಆಕ್ರಮಣ ಮಾಡುತ್ತಿದ್ದಂತೆ ಕಳ್ಳರ ಒಂದು ಗುಂಪು ಮೇನೆಯಿಂದ ಮಾಧುರ್ಯಳನ್ನು ಹೊರಗೆಳೆದು ಒಯ್ಯಲು ಯತ್ನಿಸುತ್ತಿತ್ತು. ಪಾಪ..ಮಾಧುರ್ಯ ನನ್ನಂತೆ ಶಸ್ತ್ರ ವಿದ್ಯೆ ಕಲಿಯಲಿಲ್ಲ. ಅವಳು ಸ್ತ್ರೀ ಜಾತಿಗೆ ಸಹಜವಾದ ಭರತನಾಟ್ಯ ಸಂಗೀತ ಕಲಿತಳು.

ಮಾಧುರ್ಯಳನ್ನು ನಾನು ರಕ್ಷಿಸಬೇಕು. ಆದರೆ ಇಬ್ಬರು ಕಳ್ಳರು ನನ್ನನ್ನು ನಿರಾಯುಧೆಯನ್ನಾಗಿ ಮಾಡಿದ್ದಾರೆ. ನಾನು ಅಸಹಾಯಕಿ. ನನ್ನ ಕಣ್ಣೆದುರೇ ನನ್ನ ಮಾಧುರ್ಯಳನ್ನು ಕಳ್ಳರು ಒಯ್ಯುತ್ತಿದ್ದಾರೆ.. ಕಳ್ಳರು ನಾನು ಅತ್ತಿತ್ತ ತಿರುಗದಂತೆ ನನ್ನನ್ನು ಹಗ್ಗದಿಂದ ಬಂಧಿಸುತ್ತಿದ್ದಾರೆ... ಅಷ್ಟರಲ್ಲಿ ಒಂದು ಚಮತ್ಕಾರ.... ದೇವಲೋಕದಿಂದ ಬಂದಿಳಿದಂತೆ ಒಂದು ಬಿಳಿ ಅಶ್ವ... ಅಶ್ವದ ಮೇಲೆ ಮಾರನಂತೆ ಅವ ಬಂದ...

ಏಕಾಂಗಿಯಾಗಿ ಅಷ್ಟೂ ಕಳ್ಳರ ಸದೆ ಬಡಿದು ನನ್ನ ತಂಗಿ ಮಾಧುರ್ಯಳನ್ನು ಎರಡೂ ತೋಳಲ್ಲಿ ಎತ್ತಿ ಮೇನೆಯಲ್ಲಿ ಮಲಗಿಸಿದ. ಯಾಕೋ ನನ್ನೆದೆಯಲ್ಲಿ ಬೆಂಕಿ ಬಿದ್ದಂತಾಯಿತು. ಅವಳ ಜಾಗದಲ್ಲಿ ನಾನಿರಬೇಕು ಅನ್ನಿಸುತ್ತದೆ. ಅವ ನನ್ನ ಬಳಿ ಬಂದ. ಕಳ್ಳರೆಲ್ಲ ಪಲಾಯನ ಮಾಡಿದರು. ಅವನನ್ನು ನೋಡಿದೆ.. ರತಿಯ ತೋಳನ್ನು ಈಗ ತಾನೆ ಬಿಡಿಸಿ ಬಂದ ಮನ್ಮಥನಂತಿದ್ದಾನೆ. ಯಾಕೋ ಮೊದಲ ಬಾರಿಗೆ ನನ್ನ ಹೃದಯ ತಂತಿಯನ್ನು ಯಾರೋ ಮೀಟಿದಂತಾಯ್ತು.

* * *

ಅವನು ಚಂದ್ರಚೂಡ. ಪಕ್ಕದ ಮಾತಂಗಿ ರಾಜ್ಯದ ಸಾಮಂತನ ಪುತ್ರ. ಸಾಮಂತನ ಮಗನಾದರೇನಾಯಿತು, ನಾಳೆ ಮಹಾ ಸಾಮ್ರಾಜ್ಯ ಕಟ್ಟುವ ಕಸುವು ಇವನ ತೋಳಲ್ಲಿ ಅಡಗಿದೆ. ನನ್ನ ಹೃದಯದಲ್ಲಿ ಚಂದ್ರಚೂಡ ನೆಲೆಯಾದ. ಕದ್ದು ಮುಚ್ಚಿ ನಾವಿಬ್ಬರೂ ಭೇಟಿಯಾಗುತ್ತಿದ್ದೆವು. ಮುಂದಿನ ಜೀವನದ ಕನಸನ್ನು ನಾನು ಅವನ ತೋಳ ಬಂಧಿಯಾಗಿ ಕಂಡೆ.

* * *

ನನ್ನ ಮತ್ತು ಮಾಧುರ್ಯ ಳ ಭೇಟಿಯೇ ಕಡಿಮೆಯಾಯಿತು. ಅವಳು ಸಿಕ್ಕಿದರೂ ನಾನು ಜಾರಿಕೊಳ್ಳುತ್ತಿದೆ. ಒಂದು ವೇಳೆ ಅವಳು ನನ್ನ ಪ್ರೀತಿಯ ಬಗ್ಗೆ ಕೇಳಿದರೆ...? ಅವಳೂ ನನಗೆ ಮುಖ ಕೊಟ್ಟು ಮಾತನಾಡುವುದನ್ನು ತಪ್ಪಿಸುತ್ತಿದ್ದಾಳೇನೋ ಎಂದು ನನಗನ್ನಿಸುತ್ತಿತ್ತು.

* * *

ಒಂದು ದಿನ ಚಂದ್ರಚೂಡ ರಥದಲ್ಲಿ ನನಗೆ ಕಾಣ ಸಿಕ್ಕಿದ. ಅವನ ರಥದ ಸಾರಥಿಯನ್ನು, ಬೆಕ್ಕಿನ ಕಣ್ಣಿನವನನ್ನು ಎಲ್ಲೋ ನೋಡಿದ್ದೇನೆ ಅನ್ನಿಸಿತು. ನೆನಪಾಗುತ್ತಿಲ್ಲ. ಎಲ್ಲಿ..ಎಲ್ಲಿ..ಎಲ್ಲಿ..?

* * *

ಮಹಾರಾಜರಿಗೆ ಮಗಳ ಪ್ರೀತಿ ಯ ಸುಳಿವು ಸಿಕ್ಕಿತಾ...?...ಗೊತ್ತಿಲ್ಲ... ನಮ್ಮಲ್ಲಿ ಕೇಳದೆಯೇ ನಮಗಿಬ್ಬರಿಗೂ ಸ್ವಯಂವರ ಎಂದು ನಿಶ್ಚಯಿಸಿದರು. 'ಸ್ವಯಂವರಕ್ಕೆ ಬಂದ ರಾಜಕುವರರಲ್ಲಿ ನಿಮಗೆ ಇಚ್ಛೆ ಬಂದವರನ್ನು ಆರಿಸಿಕೊಳ್ಳಿ ಮಕ್ಕಳೇ, ಮತ್ತೆ ಅಪ್ಪಾಜಿಯನ್ನು ದೂರಬೇಡಿ' ಎಂದು ವರನನ್ನು ಆರಿಸುವ ಹೊಣೆಯನ್ನೂ ನಮ್ಮ ಹೆಗಲಿಗೇ ಹಾಕಿದರು. ರಾಜ್ಯವನ್ನು ಉತ್ತರ ಮೈಥಿಲಿ ದಕ್ಷಿಣ ಮೈಥಿಲಿ ಎಂದು ವಿಭಾಗಿಸಿ ಎರಡೂ ಹೆಣ್ಣು ಮಕ್ಕಳಿಗೆ ಹಂಚಿ ನಾನು ಹಿಮಾಲಯಕ್ಕೆ ಹೋಗುತ್ತೇನೆಂದು ಮಹಾರಾಜ ತಮಾಷೆ ಮಾಡಿದರು.

***

ನಾನು ಕಾಯುತ್ತಿದ್ದ ಸ್ವಯಂವರದ ದಿನ ಬಂತು. ನಸುಕಿನಲ್ಲೇ ಎದ್ದೆ. ನನಗಿಂತ ಮೊದಲೇ ಎದ್ದಿದ್ದ ಮಾಧುರ್ಯಳನ್ನು ಕಂಡು ನನಗೇ ಅಚ್ಚರಿ. ನಿನ್ನ ವರ ಯಾರೇ...ಎಂದು ಕೇಳಿದೆ. ಅವಳೂ ಅದೇ ಪ್ರಶ್ನೆ ಕೇಳಿ ನನ್ನನ್ನು ಕಿಚಾಯಿಸಿದಳು.. ನಾನು ಚಂದ್ರಚೂಡ ನ ಗುಟ್ಟು ಬಿಟ್ಟು ಕೊಡಲಿಲ್ಲ.

***

ಸ್ವಯಂವರ ಮಂಟಪದಲ್ಲಿ ನೆರೆದ ರಾಜಕುವರರನ್ನು ಕಂಡು ಮೈ ರೋಮಾಂಚನಗೊಂಡಿತು. ಮೈಥಿಲಿಯ ರಾಜಕುವರಿಯರು ಇಷ್ಟು ಸುಂದರಿಯರೇ ಎಂದು ಉಬ್ಬಿ ಹೋದೆ. ನಮ್ಮಿಬ್ಬರ ಕೈಗಳಲ್ಲೂ ಮಾಲೆಗಳಿದ್ದವು. ನಾವಿಬ್ಬರೂ ನಾಚುತ್ತಲೂ, ಆ ನಾಚಿಕೆಯಲ್ಲೇ ಬಂದ ರಾಜಕುವರರನ್ನು ನೋಡುತ್ತಾ ಮುಂದೆ ಬಂದೆವು. ನನ್ನ ಕಣ್ಣುಗಳು ಅರಸುತ್ತಿದ್ದುದು ನನ್ನ ಚಂದ್ರಚೂಡನನ್ನು...

ಅಲ್ಲಿ ಇದ್ದಾನೆ ನನ್ನ ಮನಸು ಕದ್ದ ಚೋರ.. ಅವನಡೆಗೆ ಕೇವಲ ಹತ್ತು ಹೆಜ್ಜೆ... ಅವನ ಪಕ್ಕದಲ್ಲಿ ಅವನ ಅಂಗರಕ್ಷಕ....

ಅವನ ಕೆನ್ನೆಯಲ್ಲಿ ಗಾಯದ ಗುರುತು...ಬೆಕ್ಕಿನ ಕಣ್ಣು.. ನೆನಪಾಯಿತು...

ನಾವು ಆ ದಿನ ಮಹಾಕಾಳಿಯ ಗುಡಿಗೆ ಹೋದಾಗ ಕಳ್ಳರು ಮೇಲೆರಗಿದ್ದರು. ನಾನು ಕಳ್ಳನ ಮುಖಕ್ಕೆ ಖಡ್ಗದಿಂದ ಹೊಡೆದಿದ್ದೆ. ಕಳ್ಳನ ಮುಸುಕು ಸರಿದು ಮುಖ ಕಂಡಿತ್ತು... ಇವನು ಯಾಕೆ ಚಂದ್ರಚೂಡನ ಜತೆ ಇದ್ದಾನೆ...ಏನೋ ಹೊಳೆದು ಹೃದಯ ಕಂಪಿಸುತ್ತಿದೆ.

..ಛೆ ಇದೆಲ್ಲ ಭ್ರಮೆ...ಈ ಕ್ಷಣ ಅದೆಲ್ಲ ಯಾಕೆ...ಇನ್ನು ಎರಡೇ ಹೆಜ್ಜೆ... ಓ ದೇವರೇ...ಮುಂದಿನ ಕ್ಷಣ ನಾನೊಂದು ದುರಂತ ಕಂಡೆ.... ಸಿಡಿಲೊಂದು ನನ್ನ ಆಶಾಗೋಪುರಕ್ಕೆ ಬಡಿಯಿತು. ನನ್ನ ತಂಗಿ ಮಾಧುರ್ಯ ನನಗಿಂತ ಮುಂದೆ ಸಾಗಿ ಚಂದ್ರಚೂಡನ ಕೊರಳಿಗೆ ಮಾಲೆ ಹಾಕಿದಳು.

* * *

ಚಂದ್ರಚೂಡ ಇದನ್ನು ನಿರೀಕ್ಷಿಸಿರಲಿಕ್ಕಿಲ್ಲ. ಅವನು ಈ ಆಘಾತದಿಂದ ತತ್ತರಿಸಿರಬೇಕು, ಅವನು ಬಯಸುವುದು ಈ ಮಧುರಳ ಕೈಯ ಮಾಲೆ...ಎಂದು ನಾನಂದುಕೊಂಡರೆ...

ಇಲ್ಲ...ಅವನು ಮಾಧುರ್ಯಳ ಹಾರವನ್ನು ತಲೆ ಬಾಗಿ ಸ್ವೀಕರಿಸಿದ. ನನ್ನ ತಂಗಿ ಮಾಧುರ್ಯ ಪ್ರೀತಿಸಿದ ಹುಡುಗನೂ ಚಂದ್ರಚೂಡ, ನಾನು ಪ್ರೀತಿಸಿದ ಹುಡುಗನೂ ಚಂದ್ರಚೂಡ...

ತಂಗಿಯ ಆಯ್ಕೆ ಮುಗಿಯಿತು. ಅಕ್ಕನ ಆಯ್ಕೆ ಯಾರು ಎಂದು ಎಲ್ಲರೂ